# ಶ್ರೀಗಂಧ, ಹಾಲೆಂಡ್ ಕನ್ನಡ ಬಳಗ

# ಕರ್ನಾಟಕ ರಾಜ್ಯೋತ್ಸವ - 2012

## ವರದಿ




ನವೆಂಬರ್ 3, Amsterdam ಸುತ್ತಮುತ್ತ. ಬೆಳಗಿನ ಜಾವಾ 9 ಗಂಟೆ. ಹಾಸಿಗೆಯಿಂದಲೇ ಕಿಟಕಿಯ ಹೊರಗೆ ನೋಡಿದರೆ ನಿಜವಾಗಲೂ ಬೆಳಗಾಗಿದೆಯೋ ಇಲ್ಲವೋ ಎನ್ನುವಂತೆ ಮೋಡ, ಪಿರಿಪಿರಿ ಮಳೆ. ಈ ಬಾರಿ ಶ್ರೀಗಂಧ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವಿರುವುದು Eindhovenನಲ್ಲಿ. ಕಳೆದ ಹಲವಾರು ಬಾರಿಯಂತೆ Amsterdamನಲ್ಲಿ ಅಲ್ಲ. ಕಾರಿನಲ್ಲಿ 2 ಗಂಟೆ ಪಯಣ. ಆದರೂ, ಈ ಕಾರ್ಯಕ್ರಮಕ್ಕೆ ಹೋಗುವುದೆಂದರೆ ವಿಶೇಷ ಹುಮ್ಮಸ್ಸು. ಗಡಿಬಿಡಿ. ಇನ್ನು 1 ಗಂಟೆಯಲ್ಲಿ ಸ್ನಾನ, ತಿಂಡಿ, ರೆಡಿಯಾಗಿ ಹೊರಡಬೇಕು. ಇರಲಿ 12.30 ಒಳಗೆ ಅಲ್ಲಿದ್ದರಾಯಿತು.

Eindhoven. ಇಲ್ಲಿ ಈ ಕಾರ್ಯಕ್ರಮ ಆಗುತ್ತಿರುವುದು ಹಲವು ವರ್ಷಗಳ ಮೇಲೆ. ಹೇಗೆ organize




ಮಾಡುವುದು ಅನ್ನುವ ವಿಷಯ ಹೆಚ್ಚುಕಮ್ಮಿ ಹೊಸದೇ - ವಿಶೇಷ ಹುರುಪು, ಹಾಳಾಗದಿರಲಿ ಅನ್ನುವ ಕಳಕಳಿ. ಹಾಲ್, ಮೈಕ್, ಕುರ್ಚಿ, ಮೇಜು, ಬ್ಯಾನರ್ ಎಲ್ಲಾ ಸೇರಿಸಬೇಕು. ಅತಿಥಿಗಳ ಸ್ವಾಗತಕ್ಕೆ ಹೂ, ಮಕ್ಕಳಿಗೆ painting ಹಾಳೆಗಳು, ಕನ್ನಡ ರಾಜ್ಯೋತ್ಸವವಾದ್ದರಿಂದ ಕರ್ನಾಟಕ ಬಾವುಟ ಹಂಚಬೇಕು. ಊಟ ತರುವವನು ಸಮಯಕ್ಕೆ ಸರಿಯಾಗಿ ಬರುತ್ತಾನಲ್ಲವೇ?! ಅವನಿಗೆ pressure ಹಾಕಲು ಆಗಾಗ ಫೋನ್ ಮಾಡುವುದೇ ಒಂದು ಕೆಲಸ. ಈ ಬಾರಿ ಬಹಳಷ್ಟು ಮಂದಿ ಹೊಸಬರು.

ಅವರನ್ನು ಚೆನ್ನಾಗಿ ಮಾತನಾಡಿಸಿ, homely ಅನುಭವ ಕೊಡಬೇಕು. ಈ ಕಾರ್ಯಕ್ರಮ ಮುಂದೆಯೂ ಚೆನ್ನಾಗಿ ನಡೆಯಬೇಕೆಂದರೆ ಎಲ್ಲಾ ಕನ್ನಡಿಗರೂ ಮುಖ್ಯ ಅಲ್ಲವೇ.

ನಾವು ಈ ಕನ್ನಡ ಕಾರ್ಯಕ್ರಮಕ್ಕೆ first time ಹೋಗುತ್ತಿರುವುದು. ಕಾರ್ಯಕ್ರಮ ಇಷ್ಟವಾಗಬಹುದೇ? ಒಬ್ಬೊಬ್ಬರಿಗೆ 17.50 ಯುರೋ ಕೊಟ್ಟಿದ್ದೇನೆ. ವೇಸ್ಟ್ ಆಗದಿದ್ದರೆ ಸಾಕು. ಬಹಳ ಮಂದಿ ಹೊಸಬರು ಬರುತ್ತಿದ್ದಾರೆ ಎಂದು ಸುದ್ದಿ ತಿಳಿದಿದೆ. ನನಗೆ ಗೊತ್ತಿದ್ದವರು ಹೇಳಿರುವ function ಇದು. ಹಾಗಾಗಿ ಅಂಜಿಕೆ, ಮುಜುಗುರದಲ್ಲೂ ಧೈರ್ಯ. ಕಾರ್ಯಕ್ರಮ ಪಟ್ಟಿಯೂ ತಿಳಿದಿದೆ. ಟೈಮ್ ಪಾಸ್ ಅಂತೂ ಆಗುತ್ತದೆ.

ಹಾಲ್ ಚೆನ್ನಾಗಿದೆ, ವಿಶಾಲವಾಗಿದೆ. ಸ್ವಾಗತ ಕಕ್ಷೆಯೇ ಇದೆ. ಎಲ್ಲರೂ ಹರಟೆ ಹೊಡೆಯುತ್ತಿದ್ದಾರೆ. ಸ್ಟೇಜ್ ಸ್ವಲ್ಪ ಎತ್ತರ ಇರಬಹುದಾಗಿತ್ತಾದರೂ, ಮ್ಯೂಸಿಕ್ ಸಿಸ್ಟಮ್ ತುಂಬಾ ಒಳ್ಳೆಯ ಕ್ವಾಲಿಟಿ. First impression – Very Good!

ಕಾರ್ಯಕ್ರಮ ಆರಂಭ. ಈ ಬಾರಿ ನಿರೂಪಣೆ ಅಜಿತ್ ಸ್ಕಂದರವರಿಂದ. ಶೆಲ್ವರವರ ಮಗಳು ಪುಟಾಣಿ ಅಭಿಜ್ಞಳಿಗೆ ಪ್ರಾರ್ಥನೆ ಮಾಡಲು ಕೇಳಿಕೊಳ್ಳುತ್ತಿದ್ದಾರೆ. ಅವಳಿಗೆ ಸ್ವಲ್ಪ mood ಔಟ್ ಆಗಿದೆ. ಅರೆ! ಶೆಲ್ವರವರೇ ಪ್ರಾರ್ಥನೆ ಶುರುಮಾಡಿದರು. ಅವರು ಇಷ್ಟು ಚೆನ್ನಾಗಿ ಹಾಡುತ್ತಾರೆಯೇ? ತಿಳಿದೇ ಇರಲಿಲ್ಲ!

ಮೂರು ಮಕ್ಕಳು ಸ್ಟೇಜ್ನಲ್ಲಿ "ಕದ್ದಳು ಮನಸನ್ನ" ಚಿತ್ರಗೀತೆಗೆ ಡಾನ್ಸ್ ಮಾಡುತ್ತಿದ್ದಾರೆ. ಪೂರ್ವಿಯನ್ನು ಸುತ್ತುವರಿದು ವೇದ್ ಮತ್ತು ಸ್ಕಂದ ಅವಳ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡುವಂತೆ ಕಾಣುತ್ತಿದೆಯಾದರೂ, ಈ ಪುಟಾಣಿಗಳ ಮನಸ್ಸಿನಲ್ಲಿರುವುದು ಆಟದ ಭಾವನೆ ಅಷ್ಟೇ ಎಂದುಕೊಂಡಿದ್ದೇನೆ.

ನಂತರ ಬಂದವರು ಶೃಷ್ಟಿ, ಅಭಯ್, ಪ್ರಣವಿ ಮತ್ತು ಸಿಯೋನ. ಬಹಳ ಚೆನ್ನಾಗಿ ಡ್ರೆಸ್ ಮಾಡಿದ್ದಾರೆ. ಪುಟಾಣಿಗಳು; ಅದರೂ 'ಚೆಲ್ಲಿದರು ಮಲ್ಲಿಗೆಯಾ' ಹಾಡಿಗೆ ಒಂದೇ ರೀತಿ ಡಾನ್ಸ್ ಮಾಡುತ್ತಿದ್ದಾರೆ. ಸಣ್ಣ ಮಕ್ಕಳಿಂದ ಇಷ್ಟು expect ಮಾಡಬಹುದಲ್ಲವೇ ಎಂದು ಆಶ್ಚರ್ಯವಾಗುತ್ತಿದೆ.

ಮಾನವಿಯವರು ಕೊರಡಿಯ ಸುತ್ತ ಇಟ್ಟಿದ್ದ, ತಾನೇ ಬಿಡಿಸಿದ ಚಿತ್ರಕಲೆಯ ಬಗ್ಗೆ ಹೇಳಿದರು. ಮಧುಬನಿ ಮತ್ತು ವರ್ಲಿ ಇವರ ಶೈಲಿ. ಇವು ಭಾರತದ ಚಿತ್ರಕಲೆಗಳು, ಹಿಂದೆ ಗೋಡೆಗಳ ಮೇಲೆ, ನೆಲದ ಮೇಲೆ ಬಿಡಿಸುತ್ತಿದ್ದರು, ಈಗ ಕ್ಯಾನ್ವಾಸ್ ಮೇಲೆ ಹೆಚ್ಚಾಗಿ ಮಾಡುತ್ತಾರೆ ಎಂದು ಪರಿಚಯ ಮಾಡಿಕೊಟ್ಟರು.

ಶೆಲ್ವರವರ ಕೊಳಲು ನುಡಿ ಕಾರ್ಯಕ್ರಮ. ಇಂಪಾಗಿ ನುಡಿಸುತ್ತಾರೆ. ಕಣ್ಣುಮುಚ್ಚಿ ಆಲಿಸಿದರೆ ತಾನಾಗಿ ತಲೆದೂಗುತ್ತದೆ.

ಪ್ರಭಂಜನ್ "ಎಂಥ ಸೌಂದರ್ಯ ನೋಡು" ಎಂದು ಕನ್ನಡದ ಹಿರಿಮೆಯನ್ನು ಹೊಗಳುತ್ತಿದ್ದಾನೆ ಚಿತ್ರಗೀತೆಯ ಮೂಲಕ. ಹಾಡುವಾಗ ಅದೇನು power ಸ್ವರದಲ್ಲಿ. ಸಂದರ್ಭಕ್ಕೆ ತಕ್ಕ ಹಾಡು ಕೂಡ.

ಒಹ್ ಊಟ! ಬಫೆ. ಅನ್ನ ಮೊಸರೂ ಇಟ್ಟಿದ್ದಾರಂತೆ! ಪಕೋಡ, ನಾನ್, ಪುಲಾವ್, ಪನೀರ್, ದಾಲ್, ಮಿಕ್ಸೆಡ್ ವೆಜಿಟಬಲ್. 2 ಸ್ವೀಟ್ - ಜಾಮೂನ್ ಮತ್ತು ರಸಮಲೈ! ಊಟವೂ ಚೆನ್ನಾಗಿದೆ.



ಎರಡು ಕೌಂಟರ್ ಇರುವುದರಿಂದ ಕಾಯುವ ಪ್ರಸಂಗವಿಲ್ಲ. ಮಾತ್ರವಲ್ಲ, ಊಟ ಮಾಡುತ್ತಾ, ಹರಟೆ ಹೊಡೆಯುತ್ತಾ, ಕಡೆಯಲ್ಲಿ ಎರಡನೆ ಸರದಿಗೆ ಬಂದರೂ, ಊಟ ಇನ್ನೂ ಬಿಸಿ ಬಿಸಿಯೇ ಇದೆ. ಪೈಸ ವಸೂಲ್ ☺

ಮಧ್ಯಾನದ ಕಾರ್ಯಕ್ರಮಗಳು ಶುರು. ಶೆಲ್ವ ಮತ್ತೆ ಸ್ಟೇಜ್ ಕಡೆ ಬಂದರೆ! ಇವರು ಹಾಡಿದರು, ಕೊಳಲು ನುಡಿಸಿದರು, ಈಗ ನಾಟಕವನ್ನು ಮಾಡುತ್ತಿದಾರೆ. ಅವರ ಟ್ಯಾಲೆಂಟ್ ಮೆಚ್ಚಬೇಕು......ಕೈಇಲ್ಲದಿದ್ದರೂ ಅಡಿಗೆ ಮಾಡಿ ಹೊಸ ಹೆಂಡತಿಯನ್ನು impress ಮಾಡಬೇಕಂತೆ. ಅದನ್ನು ಶ್ಯಾಮ್ ಹೇಳಿಕೊಡುತ್ತಾರಂತೆ.....ಹೂಕೋಸಿನಲ್ಲಿ ಆಲೂ ಪಲ್ಯವಂತೆ.....ರಾಮ, ರಾಮ!

ಶ್ರೇಯಸ್ ತಾನು ಕ್ರಿಕೆಟ್ ಆಡುವಷ್ಟೇ ಸುಲಭವಾಗಿ ಶ್ಲೋಕ ಹೇಳುತ್ತಿದ್ದಾನೆ. ಪುಸ್ತಕ ನೋಡಿ ಹೇಳುತ್ತಿದ್ದಾನೆ.....ಅದು ಕನ್ನಡದಲ್ಲಿ ಬರೆದಿದೆಯೇ, ಇಂಗ್ಲಿಷ್ನಲ್ಲೇ?

ಪ್ರಭಂಜನ್ keyboard ಚೆನ್ನಾಗಿ ನುಡಿಸುತ್ತಿದ್ದಾನೆ. ಕನ್ನಡ ಚಿತ್ರಗೀತೆಗಳನ್ನು ಅರ್ಧ ನುಡಿಸಿ ಅದು ಯಾವುದು ಅಂತ ನಾವು ಪ್ರೇಕ್ಷಕರು ಊಹಿಸಬೇಕಂತೆ. ಸ್ವಲ್ಪ ನಮ್ಮ ತಲೆಯನ್ನು ಚುರುಕುಗೊಳಿಸೋಣ......ಆದರೆ ಈ ಅಜಿತ್ ಸ್ಕಂದನಿಗೆ ಎಲ್ಲ ಗೀತೆಗಳೂ ತಿಳಿದಂತಿದೆಯಲ್ಲ!!?? ಷಭಾಶ್.

ಓ Amsterdam ladies dance. ಆಕರ್ಷಕವಾಗಿ ಒಂದೇ ರೀತಿ ಡ್ರೆಸ್ ಮಾಡಿಕೊಂಡಿದ್ದಾರೆ. ಅಡವಿ ದೇವಿಯ ಕಾಡು ಜನಗಳ ಹಾಡು. ಸ್ನೇಹ, ವೀಣಾ, ಸೀಮಾ, ರೂಪ, ಶಿಲ್ಪ ಎಲ್ಲರೂ ಒಟ್ಟಿಗೆ synchornization ಇಂದ ಡಾನ್ಸ್ ಮಾಡುತ್ತಿದ್ದಾರೆ. ಚಪ್ಪಾಳೆ.

Eindhoven ಮಹಿಳೆಯರು. ಕಳೆದಬಾರಿ fusion ಡಾನ್ಸ್ ಮಾಡಿ ಏನೋ ಹೊಸದು ತೋರಿಸಿದ್ದರು. ಈ ಬಾರಿ ಏನು ಹೊಸದನ್ನು ಮಾಡುತ್ತಾರೆ? ಕುತೂಹಲ. ಡ್ರೆಸ್ ನೋಡಿದರೆ ಇಲ್ಲಿ ಸಿಗುವ ಡ್ರೆಸ್ ಅಲ್ಲ. ಇಂಡಿಯಾದಲ್ಲಿ ಹೋಲಿಸಿ ತರಿಸಿರಬೇಕು......"ತುಂತೂರು ತುಂತೂರು ತುಂತುರು" ಎಂದು ಹಾಡು.....ಉಷಾ, ವಿನುತ ಚಂದ್ರು, ಮಾಧವಿ ಗುಲಾಬಿ ಬಣ್ಣದ ಕೊಡೆ ಬಿಡಿಸಿದರೆ, ವಿನುತ ಶ್ಯಾಮ್, ಕುಸುಮ, ಅಕ್ಷತ ಹಳದಿ ಬಣ್ಣದ ಕೊಡೆ ಮಡಚಿ ತೆರೆಯುತ್ತಿದ್ದಾರೆ. ವಾರೆವಾಹ್ ! ಪ್ರದರ್ಶನಕ್ಕೆ ತಕ್ಕವಾಗಿ ಹಿಂದಿನ ಬೆಂಚಿನ ಹುಡುಗರಿಂದ ಸೀಟಿ. ಪ್ರೇಕ್ಷಕರ ಚಪ್ಪಾಳೆ. ಹಾಡು ಮುಗಿದರೂ ಇನ್ನೂ ಇವರ ಡಾನ್ಸ್ ಮುಗಿಯಲಿಲ್ಲವೇ? ಓ ರೆಮೋ ಅವರ ಕೊಳಲ ಹಾಡು! 3 ಕೋಲುಗಳನ್ನು ಹಿಡಿದು ಡಾನ್ಸ್ ಮಾಡುತ್ತಿದ್ದಾರೆ. ಕೋಲಿನ ಮಧ್ಯ ಕುಣಿದು ಡಾನ್ಸ್. ಅಂತೂ ಈ ಬಾರಿಯೂ ಹೊಸದು ತೋರಿಸಿಬಿಟ್ಟರು. ಪ್ರೇಕ್ಷಕರಿಂದ ಸೂಕ್ತ ಕರತಾಡನ, "once more" ಕೇಕೆ.

ಮೊದಲ ಬಾರಿ ಈ ಕನ್ನಡ ಕಾರ್ಯಕ್ರಮಕ್ಕೆ ಬಂದವರು ಸ್ಟೇಜ್ ಮೇಲೆ ಬರಬೇಕಂತೆ, ತಮ್ಮ ಪರಿಚಯ ಹೇಳಿಕೊಳ್ಳಬೇಕಂತೆ. ಸತೀಶ್ ಶಾಸ್ತ್ರಿ ಕರೆಯುತ್ತಿದ್ದಾರೆ. ಮೊದಲು ಶ್ರೀಗಂಧದ ಇತಿಹಾಸ ಹೇಳಿದರು. ವರ್ಷಕ್ಕೆ ಎರಡು ಬಾರಿ ಈ ಕಾರ್ಯಕ್ರಮ ನಡೆಯುತ್ತದಂತೆ. ಒಂದು ಯುಗಾದಿ ಸಮಯದಲ್ಲಿ. ಇದು ಈ ವರ್ಷದ ಎರಡನೆಯ ಕಾರ್ಯಕ್ರಮ. ಅದಕ್ಕೆ ಆಂಸ್ಟರ್ಡ್ಯಾಮ್, ಐಂನ್ಡೋವನ್, ಡೆನ್ ಹಾಗ್ ಎನ್ನದೆ ಎಲ್ಲರೂ ಚೆನ್ನಾಗಿ ಬೆರೆಯುತ್ತಿದಾರೆ.

ಮಂಜುಳಾ ಪ್ರಸಾದ್ ಅವರು ಸ್ಟೇಜ್ ಮೇಲೆ ಬಂದು "ಬಾರಯ್ಯ ರಂಗ" ಹಾಡನ್ನು ಎಂದು ರಾಗವಾಗಿ, ಅತ್ಯುತ್ತಮವಾಗಿ ಹಾಡಿದರು.

ಭಾರತದ ಪ್ರಾಚೀನ, ದಕ್ಷಿಣ ಭಾರತದ ಪ್ರಸಿದ್ಧ ನಾಟ್ಯಕಲೆ ಭರತನಾಟ್ಯಂ. ಸ್ನೇಹರವರು ಅದೆಷ್ಟು ಸುಂದರವಾಗಿ ಮಾಡುತ್ತಿದ್ದಾರೆ. ಈ ವೇಷಭೂಷಣ ಇವರಿಗೆ ಎಲ್ಲಿಂದ ಸಿಕ್ಕಿತು? ನಾನು ಕರ್ನಾಟಕದಲ್ಲಿದ್ದೆನೆಯೇ, ವಿದೇಶದಲ್ಲೇ?

ಶ್ಯಾಮ್ ಬಂದರು! ಗೊತ್ತಿರುವ ವಿಷಯ......ಇನ್ನು ನಾವೆಲ್ಲಾ ನಗುವ ಸಮಯ! "ಅಗ್ಗದ ವಿಮಾನ"ದ ಬಗ್ಗೆ ನಾಟಕ. ವಿಮಾನ ಚಾಲಕ ಶ್ಯಾಮ್ ಬಂದು "ಆ ರಾಟಡ್ಯಾಮ್ ರಾಟಡ್ಯಾಮ್ ರಾಟಡ್ಯಾಮ್" ಎಂದಾಗ ನಗೆ ಶುರುವಾಯಿತು. ಅನಂತರ ಬೆಬೋ ವಿನುತ ಚಂದ್ರು, ಘಾಟಿ ಮುದುಕಿ ವಿನುತ ನಾಯಕ್, ನಿತ್ಯಾನಂದರನ್ನೂ ನಾಚಿಸುವ ಚಪಲ ಸನ್ಯಾಸಿ ವಿನಯ್ ಎಲ್ಲಾ ಶ್ಯಾಮ್ ಅವರನ್ನು ಮಂಗ ಮಾಡಿ, ಪುಕ್ಸಟೆಯಾಗಿ ವಿಮಾನ ಹತ್ತಿ ನಿಂತರು. ನಾಟಕದ ವೇಷ ಭೂಷಣದ ಹೈಲೈಟ್, ಫ್ಲೈಟ್ ಅನೌನ್ಸರ್ "ಮನಮೋಹಿನಿ" ಬಂದಳು/ಬಂದನು. ಡಾ. ಮೋಹನ್ ಅವರ 'ಮನಮೋಹಿನಿ' ಅವತಾರಕ್ಕೆ ಪ್ರೇಕ್ಷಕರಿಂದ ಸೀಟಿ, ನಗೆ, ಕೇಕೆ! ಮಕ್ಕಳು ಬಿದ್ದು ಬಿದ್ದು ನಕ್ಕರು. ಒಂದು ಮಗು, "ಯುರೇಕಾ" ಎನ್ನುವಷ್ಟೇ ಉದ್ವೇಗದಲ್ಲಿ "ಇಟ್ ಇಸ್ ಅ ಬಾಯ್" ಎಂದು ಉದ್ಗರಿಸಿದಳು! ಅನಂತರ ಬಿಕ್ಷೆ ಬೇಡುತ್ತಾ, ಉಷಾ ಮತ್ತು ಮಧು ಪ್ರವೇಶ. ಬಿಕ್ಷೆಗೆ 'low cost airline'ಗೆ ಬರುವುದೇ?



ಅಂತೂ ಹಾಸ್ಯದ punchಗಳ ಸುರಿಮಳೆಯಾಗಿ ನಾಟಕ ಮುಗಿಯಿತು. ಪ್ರೇಕ್ಷಕರೊಬ್ಬರು ಪರವಾಗಿಲ್ಲ ಸ್ವಲ್ಪ border line ಆದರೂ, "U certificate" ಕೊಡಬಹುದು ಎಂದಾಗ, ನಿರ್ದೇಶಕ ಶ್ಯಾಮ್ ಸಮಾಧಾನದ ನಿಟ್ಟುಸುರು ಬಿಟ್ಟರು ☺

ಪ್ರಸನ್ನ ಮತ್ತು ರಶ್ಮಿ, ಈ ಬಳಗದ ಖಾಯಂ ಗಿರಾಕಿ......ಇವರು 10 ವರ್ಷ ನೆದರ್ಲ್ಯಾಂಡ್ಸ್ ವಾಸವಾದ ಮೇಲೆ ಇಂಡಿಯಾಗೆ ತೆರೆಳುತ್ತಿದ್ದಾರೆ. ಬಹಳ ಅನ್ಯೋನವಾಗಿ ಈ ಗುಂಪಿನೊಂದಿಗೆ ಬೆರೆಯುತ್ತಿದ್ದವರು. ಇವತ್ತಿನ ಕಾರ್ಯಕ್ರಮದ ವೀಡಿಯೊಗ್ರಾಫರ್ ಇವರೇ. ಇವರಿಗೆ ಶ್ರೀಗಂಧದ ವತಿಯಿಂದ ಹೂ

ಗೊಂಚಲು ಮತ್ತು ಕಳೆದ ವರ್ಷ ಕನ್ನಡ ಕಾರ್ಯಕ್ರಮದ 'ಗ್ರೂಪ್ ಫೋಟೋ' ಕೊಟ್ಟು send off ಆಯಿತು.

ಶ್ರೀವತ್ಸ ಸ್ಟೇಜ್ ಏರಿ ಪ್ರೇಕ್ಷಕರ ತಲೆಗೆ ಕೆಲಸಕೊಡಲು ಶುರು ಮಾಡಿದರು. ಒಗಟು, ಸಂಧಿ ಸಮಾಸ, ನಾಲಗೆ twister, ರಸಪ್ರಶ್ನೆ ಎಲ್ಲಾ ಕೇಳುತ್ತಿದ್ದಾರೆ. ಶಾಲೆಗೆ ಹೋಗುತ್ತಿದ್ದಾಗ ಇವೆಲ್ಲ ಸಿಂಪಲ್ ಪ್ರಶ್ನೆಗಳು, ಈಗೆಲ್ಲಾ ಮರೆತುಹೋಗಿದೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದರೆ...... ಹಿಂದೆ ಲಘು ತಿಂಡಿ ಇದೆ ಎಂದು ಪ್ರಕಟಿಸಿದ್ದಾರೆ. ತಿಂಡಿ ತಿನ್ನುತ್ತ, ಪ್ರಶ್ನೋತ್ತರ ಸೂಕ್ತ.

ಕಾರ್ಯಕ್ರಮ ಶುರುವಾದಾಗಿನಿಂದ ಒಂದಿನಿತೂ ಆಯಾಸವಿಲ್ಲದೆ ಪ್ರಸನ್ನ ವೀಡಿಯೊ ಮಾಡುತ್ತಿದರೆ, ಪೃಥ್ವಿ ಹಾಲ್ ಸುತ್ತ ಓಡಾಡಿ ಬೇರೆಬೇರೆ ಕಡೆಗಳಲ್ಲಿ ಏನಾಗುತ್ತಿದೆ ಎಂದು ತಮ್ಮ ಕ್ಯಾಮೆರಾ ಮೂಲಕ ಸೆರೆಹಿಡಿಯುತ್ತಿದಾರೆ! ಇವರ ವೀಡಿಯೊ ಹಾಗು ಭಾವಚಿತ್ರಗಳು ಈ ಕಾರ್ಯಕ್ರಮವನ್ನು ನೆನೆಯಲು ಉಪಯುಕ್ತ. ನಾನು ಎಷ್ಟು ಫೋಟೊಗಳಲ್ಲಿ ಬಂದಿರುವೆನೋ.....ಸರಿಯಾಗಿ ಬಂದಿದ್ದಾರೆ ಸಾಕು ;)

ಅರೆ! ಸಮಯವಗಲೇ 5.30!! ಗಣೇಶ್ ಅವರು ಎಲ್ಲರೂ ಬಂದು ಕಾರ್ಯಕ್ರಮ ಚೆನ್ನಾಗಿ ನಡೆಸಿ ಕೊಟ್ಟದ್ದಕ್ಕೆ ವಂದನಾರ್ಪಣೆ ಹೇಳಿತ್ತಾ ಇನ್ನು ಕೊಟಡಿ ಸ್ವಚ್ಚ ಮಾಡಬೇಕು ಅಂತ ಕೇಳಿಕೊಂಡರು. ಎಲ್ಲಾರೂ ಸೇರಿ ಕುರ್ಚಿ, ಮೇಜು ಒಳಗಿಟ್ಟು, ಕಸಗುಡಿಸಿ ಹೊರಡುವಾಗ 6.10. ನೆನಪುಳಿಯುವ ಅನುಭವ, ಭಾರತದಲ್ಲಿದ್ದರೂ ಈ ರೀತಿಯಾಗಿ ಸೇರುತ್ತಿದ್ದೆವೋ ಇಲ್ಲವೋ!

ಇತರ ಕನ್ನಡಿಗರಿಗೆ ನಮ್ಮ ಬಳಗದ ಬಗ್ಗೆ ಹೇಳಬೇಕು, ಫೇಸ್ಬುಕ್ ಮೂಲಕ ಸಂದೇಶ ಕಳುಹಿಸಿದರಾಯಿತು: http://www.facebook.com/groups/shreegaMdha/

Video:

1. All: http://www.yubby.com/c/Rajyotsava2012
2. Only Dance: http://www.youtube.com/watch?v=M70mDL4x87k&feature=relmfu
3. Only Nataka: http://www.youtube.com/watch?v=qt-uqYj1FH4&feature=relmfu

Photo:

1. https://picasaweb.google.com/lh/sredir?uname=100623245765982976859&target=ALBUM&id=5807793609610669185&authkey=Gv1sRgCPe59bDy7vLRmAE&invite=CP3b97sK&feat=email
2. http://rajyotsava2012.shrigandha.nl/




ಶ್ರೀಗಂಧ